ಯಲ್ಲಾಪುರದ ತಾಲ್ಲೂಕು ಆಸ್ಪತ್ರೆಯಲ್ಲಿ ವೈದ್ಯೆಯಾಗಿರುವ ಡಾ.ಸೌಮ್ಯ ಕೆ.ವಿ. ಕಥೆ, ಕವನಗಳನ್ನು ಬರೆಯುವ ಹವ್ಯಾಸವನ್ನು ಸದಾ ಪೋಷಿಸುತ್ತ ಬಂದವರು. ಪುಸ್ತಕ ಓದುವುದೆಂದರೆ ಬಹಳ ಇಷ್ಟ. ಆಸ್ಪತ್ರೆಯಲ್ಲಿಯೇ ಪುಟ್ಟದೊಂದು ಗ್ರಂಥಾಲಯವನ್ನು ರೂಪಿಸಿ, ಆಸಕ್ತರು ಓದಲಿ ಎಂದು ಹಾರೈಸುವವರು. ವೈದ್ಯಕೀಯ ಅನುಭವಗಳ ಸರಣಿ ಲೇಖನಗಳನ್ನು ಬರೆಯುತ್ತಾ ತಮ್ಮ ಅನುಭವ ಪ್ರಪಂಚಕ್ಕೆ ಅಕ್ಷರ ರೂಪ ಕೊಡುವ ಉತ್ಸಾಹಿ.

ಜನ ಜಾಸ್ತಿ, ಮೊದಲಿನಂತೆ ಅಲ್ಲ.. ಕಡೇ ಕಾಲದಲ್ಲಿ ಮಕ್ಕಳು ಕಾಲ ಬುಡದಲ್ಲಿ ಇದ್ರೆ ಅದೇ ಪುಣ್ಯ ಎಂದು ಹೇಳಿದವನ ಬುರುಡೆಗೆ ನಾಕು ಹಾಕಬೇಕು. ಮಗ ಸೊಸೆ ಎಲ್ಲೋ ದೂರದಲ್ಲಿದ್ದು ಫೋನಿನಲ್ಲಿ ಬಕ್ಕಾಣೆಯ ನಾಕು ಮಾತಾಡಿ ವರ್ಷಕ್ಕೊಂದೆರಡು ಸಲ ಬಂದು ಹೋಗುವುದೇ ಸುಖ ಎಂದು ಎನಿಸಿಬಿಟ್ಟಿತ್ತು ಅವಳಿಗೆ.

ಮಾವಳ್ಳಿಯ ಜಾತ್ರೆ ಬಂತು..! ಐದು ವರುಷಕ್ಕೊಮ್ಮೆ ಕೂಡುವ ಅದ್ದೂರಿಯ ಜಾತ್ರೆ.. ಆಚೀಚೆ ಮನೆಯ ಹೆಂಗಸರೊಂದಿಗೆ ಕುಣಕೊಂಡು ಜಾತ್ರೆಗೆ ಹೊರಟಳು ಭಾಗ್ಯಶ್ರೀ. ಆನ್‌ಲೈನಲ್ಲಿ ಆರ್ಡರು ಮಾಡಿಕೊಂಡ ಫ್ರಿಲ್ ಸೀರೆ.. ಭರ್ಜರಿ ಬ್ಯಾಕ್ ಡಿಸೈನು ಮಾಡಿಸಿ ಹೊಲಿಸಿದ ರವಿಕೆ.. ಈಗೀಗ ಸೀರೆಗಿಂತ ರವಿಕೆ ಹೊಲಿಸುವುದಕ್ಕೇ ಹೆಚ್ಚು ಖರ್ಚು!! ತಾಯಿಯ ಮನೆಯಲ್ಲಿ ಹಾಕಿದ ಬಂಗಾರವನ್ನೂ ಗಂಡನ ಮನೆಯದ್ದನ್ನೂ ಸೇರಿಸಿ ಕುತ್ತಿಗೆ ವಜ್ಜೆಯಾಗುವಷ್ಟು ಆಭರಣ ಹೇರಿಕೊಂಡು ದಿವಿನಾಗಿ ತಯಾರಾಗಿ ಹೊರಟ ಸೊಸೆಯನ್ನು ಕಂಡು ಸುವರ್ಣಕ್ಕನಿಗೆ ತಡೆಯಲಾಗಲಿಲ್ಲ. "ಅಯ್ಯೋ ಜಾತ್ರೆ ಪೇಟೆ ರಶ್ಶಲ್ಲಿ ಯಾರಾದ್ರೂ ಕುತ್ಗೆಯಿಂದ ಹರಕೊಂಡು ಹೋದ್ರೆ ಎಂತ ಮಾಡೂದು!! ಈ ಪರಿ ಬಂಗಾರ ಯಾಕೆ ಹಾಕ್ಕೊಂಡೆ" ಎಂದು ಅಡ್ಡಬಾಯಿ ಹಾಕಿದಳು. ಅತ್ತೆ ತನ್ನನ್ನು ಕಂಡು ಹೊಟ್ಟೆಕಿಚ್ಚಿಗೆ ಹಾಗೆ ಹೇಳಿದಳು ಎಂದುಕೊಂಡ ಭಾಗ್ಯಶ್ರೀ, "ಅದಕ್ಕೆಲ್ಲ ನಶೀಬು ಬೇಕು.. ಇದ್ರೂ ಉಡದೇ ತೊಡದೇ ಹಳಸಿದ್ದು ತಿಂದು ದುಡ್ಡು ವಟ್ಟಾಕುವವರು ಇರುತ್ತಾರೆ.. ಏನು ಮಾಡುವುದು ಅವರವರ ಯೋಗ.. ಅವರವರ ಯೋಗ್ಯತೆ" ಕೆನ್ನೆಗೆರಡು ತಪರಾಕಿ ಕೊಟ್ಟವಳಂತೆ ಹೇಳಿ ಹೋದ ಸೊಸೆಯನ್ನು ಗುರಾಯಿಸಿ ಹಣೆ ಹಣೆ ಚಚ್ಚಿಕೊಂಡಳು ಸುವರ್ಣಕ್ಕ. ಇವಳಿಗೊಂದು ಮದ್ದು ಅರೆಯದೇ ಹೋದ್ರೆ ಬರಕತ್ತಾಗಲಿಕ್ಕಿಲ್ಲ ಎಂದು ಮೈ ಪರಚಿಕೊಂಡು ಏನು ಉಪಾಯ ಮಾಡಲಿ ಎಂದು ಯೋಚಿಸತೊಡಗಿದಳು.



ಮಾವಳ್ಳಿ ಜಾತ್ರೆಯಲ್ಲಿ ವಿಡಿಯೋ ಮಾಡಿ ಇನ್‌ಸ್ಟಾಗ್ರಾಮಿನಲ್ಲಿ ಪೋಸ್ಟ್ ಮಾಡಿದ ಭಾಗ್ಯಶ್ರೀಗೆ ಸುಮಾರು ಲೈಕುಗಳು ಬಂದವು. ಅವಳ ಹಳೆಯ ಗೆಳತಿಯೊಬ್ಬಳು ಯಲ್ಲಾಪುರದ ಬಸ್‌ಸ್ಟ್ಯಾಂಡು ಪಕ್ಕದಲ್ಲಿ ಮನೆ ಇರುವವಳು ಮತ್ತೆ ಕಾಂಟಾಕ್ಟಿಗೆ ಸಿಕ್ಕಿದಳು. ಅವಳ ಮನೆಯ ಮೇಲಿನ ಬಿಡಾರ ಬಾಡಿಗೆಗೆ ಕೊಡಲಿಕ್ಕುಂಟು.. ಮುಂದೆ ಕೂಸಿಗೆ ಪ್ರೀಕೇಜಿಗೆ ಹಾಕಲು ಅನುಕೂಲ. ಮಹೇಶನಿಗೂ ಅಡಿಕೆ ವಖಾರಿಗೆ ಹತ್ತಿರ. ಹದಿನೈದು ದಿನಕ್ಕೆ ಕಾನುಗೋಡಿಗೆ ಹೋಗಿ ಬಂದ್ರೆ ಆಯ್ತಲ್ಲ.. ಎಂದು ಭಾಗ್ಯಶ್ರೀಯ ತಲೆ ತಿನ್ನುತ್ತಿದ್ದ ಸಮಸ್ಯೆಗೆ ಒಂದು ಸರಳ ಪರಿಹಾರ ಹೇಳಿಕೊಟ್ಟಳು ಹಳೆಯ ಗೆಳತಿ. ಇದಕ್ಕೆ ಗಂಡನನ್ನು ಒಪ್ಪಿಸಲು ಎಂತ ಉಪಾಯ ಮಾಡುವುದಾಯ್ತು ಎಂದು ವಿಚಾರಕ್ಕೆ ಬಿದ್ದಳು ಭಾಗ್ಯಶ್ರೀ.

* * *

ಅಡಿಗೆ ಕೋಣೆಯ ಎಡ ಮಗ್ಗುಲಿಗೆ ಒಂದು ಉದ್ದಕ್ಕೆ ಕಟ್ಟಿದ ಕೋಣೆ- ಓರಿವಳ ಇದೆ. ಏನಾದರೂ ಹೆಚ್ಚುಗಟ್ಲೆ ಆದಾಗ ಅಲ್ಲಿನ ಸೌದೆಒಲೆಗೆ ಜೀವ ಬರುತ್ತದೆ. ಉಳಿದಂತೆ ನಿತ್ಯಕ್ಕೆ ಬಳಕೆ ಕಡಿಮೆ. ಲಕ್ಷ್ಮಿನಾರಾಯಣ ದೇವರ ಪೂಜೆಯ ಮಡಿ ಬಟ್ಟೆಯನ್ನು ಒಣಗಿಸುವ ತಾವು ಅಲ್ಲಿನ ಮೂಲೆಯ ಸರಿಗೆ. ಹೊರಗೆ ಒಣಗಿಸಿದರೆ ಕಾಗೆಯೋ, ಕುನ್ನಿಯೋ ಮುಟ್ಟಿ ಮೈಲಿಗೆ ಆದೀತೆಂದು ಅನೂಚಾನವಾಗಿ ಬಂದಿರುವ ಪದ್ಧತಿ ಅದು.

ಬೆಳಗ್ಗೆ ಮಿಂದು ಟುವಾಲು ಸುತ್ತಿಕೊಂಡು ಮಡಿ ಬಟ್ಟೆ ಧರಿಸಲು ಅಡಿಗೆ ಮನೆ ದಾಟಿ ಓರಿವಳಕ್ಕೆ ಹೋದ